# ವೇದಸಾರ ಶಿವ

ಡಾ. ಕೆ. ಎಲ್. ಪ್ರಸನ್ನಾಕ್ಷಿ

**ಲೋ**ಕದ ಗತಿ ವೃತ್ತಮಯ. ಅಂದರೆ, ಎಲ್ಲಿಂದ ಆರಂಭ ವಾಗುವುದೋ ಅಲ್ಲಿಗೇ ಹೋಗಿ ನೆಲೆಸುವುದು. ಉದಾಹರಣೆಗೆ ಬೀಜ. ಅದು ಮೊಳಕೆ ಒಡೆದು ಚಿಗುರು, ಕಾಂಡ, ಎಲೆ ಮುಂತಾಗಿ ಬೆಳೆದು ಮತ್ತೆ ಬೀಜದಲ್ಲೇ ಕೊನೆಗೊಳ್ಳುತ್ತದೆ. ನೀರು ಸಮುದ್ರ ದಿಂದ ಆವಿಯಾಗಿ ಮೋಡವಾಗಿ, ಮಳೆ ಹನಿಯಾಗಿ, ಹಳ್ಳ ಬಾವಿ ಕುಂಟೆ ಕೆರೆ ನದಿ – ಹೀಗೆ ಬೆಳೆದು ಸಾಗಿ ಸಮುದ್ರದಲ್ಲಿ ಸೇರುತ್ತದೆ. ಹೀಗೆಯೇ ನಿಸರ್ಗದ ಪ್ರತಿಯೊಂದರ ನಡೆಯೂ ಆರಂಭದಲ್ಲಿಯೇ ಹೋಗಿ ನಿಂತು ಕೊನೆಗೊಳ್ಳುವುದು ಅನುಭವ ವೇದ್ಯವಾದ ವಿಷಯ. ಅಂತೆಯೇ ಭಗವತ್ತತ್ತ್ವದಿಂದ ವಿಕಾಸಗೊಂಡ ಜೀವಿ ಮತ್ತೆ ಭಗವಂತನಲ್ಲಿಯೇ ಲೀನವಾದಾಗ ಅದರ ಬಾಳು ಸಾರ್ಥಕವಾಗುವುದು.



ಈ ಭಗವತ್ತತ್ತ್ವ ಎಂದೋ ಯಾವುದರಿಂದಲೋ ಹುಟ್ಟಿದುದಲ್ಲ. ಇದು ಸದಾ ಇರುವ, ಶಾಶ್ವತವಾದ ಹುಟ್ಟು ಸಾವುಗಳಿಲ್ಲದ, ಅನಂತ ಅಪಾರ ಅನುಪಮ ಅದ್ವಿತೀಯ ಶಕ್ತಿ. ಇದಕ್ಕೆ ಯಾವುದೇ ಹೆಸರನ್ನು ಕೊಡಬಹುದು. ಈ ತತ್ತ್ವವನ್ನು ಕಾಣುವುದಕ್ಕಾಗಿ ನಮಗೆ ಈ ಶರೀರ ದೊರೆತಿರುವುದು. "ಪುಣ್ಯವೆಂಬ ಹಣದಿಂದ ಈ ಶರೀರವೆಂಬ ನೌಕೆಯನ್ನು, ಹುಟ್ಟು–ಸಾವುಗಳುಳ್ಳ 'ಭವ'ವೆಂಬ ಸಮುದ್ರವನ್ನು ದಾಟಲು ಜ್ಞಾನ ಪಡೆದಿದ್ದೀರಿ. ಅದು ಒಡೆದು ಹೋಗುವ ಮುನ್ನ ಭವಸಾಗರ ನಿಯಾಮಕನಾದ ಈ ಭಗವತ್ತತ್ತ್ವವನ್ನು ಕಾಣಿರಿ, ಹೊಂದಿರಿ" ಎಂದು ಋಷಿವಾಣಿ ಘೋಷಿಸುತ್ತದೆ. ಮತ್ತೆ ಇದು ಅಸಾಧ್ಯವಾದುದೇನಲ್ಲ, ಏಕೆಂದರೆ **'ವೇದಾಹಮೇತಂ ಪುರುಷಂ ಮಹಾಂತಂ...'** – "ಈ ಪರಮೋತ್ಕೃಷ್ಟನಾದ ಪುರುಷನನ್ನು ನಾನು ತಿಳಿದಿದ್ದೇನೆ" ಎಂದು ಋಷಿ ತನ್ನ ಅನುಭವವನ್ನೇ ಆದರ್ಶವಾಗಿ ಮುಂದಿಡುತ್ತಾನೆ.

ಈ ಭಗವತ್ತತ್ತ್ವಕ್ಕೆ ಅನಂತ ರೂಪ, ಅನಂತ ನಾಮಗಳು. ವೇದ ಆ ಪರಮಪುರುಷನನ್ನು, **'ಸ ಬ್ರಹ್ಮ ಸ ಶಿವಃ ಸ ಹರಿಃ ಸೇಂದ್ರಃ ಸೋಽಕ್ಷರಃ ಪರಮಸ್ವರಾಟ್'** ಮುಂತಾದ ಉಕ್ತಿಗಳ ಮೂಲಕ ವಿವಿಧ ಬಗೆಗಳಲ್ಲಿ ಬಣ್ಣಿಸುತ್ತದೆ. ಬ್ರಹ್ಮ, ಶಿವ, ಹರಿ, ಇಂದ್ರ ಮೊದಲಾದ ವಿವಿಧ ನಾಮರೂಪಗಳಿಂದ ಕೂಡಿದ ಆ ಪರತತ್ತ್ವವು ನಾಶರಹಿತವಾದುದು; ತನಗೆ ತಾನೇ ಬೆಳಗುವಂಥದು; ತನಗೆ ತಾನೇ ಒಡೆಯನಾಗಿರುವುದು ಎಂದು ವೇದಗಳು ಸಾರುತ್ತವೆ. ಅದಲ್ಲದೆ, ಈ ಒಂದೇ ತತ್ತ್ವಕ್ಕೆ ನಾನಾ ನಾಮರೂಪಗಳಿವೆ ಎಂದೂ ಸ್ಪಷ್ಟಪಡಿಸುತ್ತವೆ.

ದೇವರು ಒಂದೇ ಎಂದಮೇಲೆ ಅನಂತ ನಾಮರೂಪಗಳು ಏಕೆ ಎಂಬ ಪ್ರಶ್ನೆ ಮೂಡುವುದು ಸಹಜ. ಜೀವಿಯ ಸಂಸ್ಕಾರ, ಭಾವ, ಅನುಭವಗಳ ವಿಭಿನ್ನತೆಯಿಂದ ಬಗೆಬಗೆಯ ನಾಮ–ರೂಪ–ಭೇದಗಳಿರುವ ಭಗವಂತನಲ್ಲಿ ಆಕರ್ಷಣೆ, ಪ್ರೀತಿ ಮತ್ತು ಆಸಕ್ತಿಗಳು ಹುಟ್ಟುತ್ತವೆ. ಅವನಿಗೆ ಅದೇ ಪರಮದೈವವಾಗಿ ಬೇರೆ ಎಲ್ಲವೂ ಗೌಣವಾಗುತ್ತವೆ. ಈ ಅಂಶವನ್ನು ವಿವಿಧ ಪುರಾಣಗಳು (ಗಣೇಶ, ಸ್ಕಂದ, ಶಿವ, ದೇವಿ ಇತ್ಯಾದಿ) ದೃಢಪಡಿಸುತ್ತವೆ. ಈ ಕಾರಣದಿಂದಲೇ ಭಾರತದಲ್ಲಿ ಸಾವಿರಾರು ದೇವತಾರೂಪಗಳ ಉಪಾಸನೆ ಪ್ರಚಲಿತವಾಗಿರುವುದು. ಅಂತಹ ಒಂದು ದೇವತಾ ರೂಪವೇ 'ಶಿವ.' ಶಿವತತ್ತ್ವದ ಸ್ವರೂಪದ ಲಕ್ಷಣಗಳ ವಿವರಣೆ ವೇದ, ಉಪನಿಷತ್ತು, ಪುರಾಣ, ಸ್ತೋತ್ರ ಮೊದಲಾದ ಪ್ರಾಚೀನ ಸಾಹಿತ್ಯಗಳಲ್ಲಿ ಲಭ್ಯವಿದೆ.

ಸಾಹಿತ್ಯದ ಮೂಲ ಸೆಲೆಯಾದ ವೇದಗಳಲ್ಲಿ ಅತ್ಯಂತ ಪ್ರಾಚೀನವಾದ ಋಗ್ವೇದದ ಮೂರನೆಯ ಮಂಡಲ, ನಾಲ್ಕನೆಯ ಅಷ್ಟಕದಲ್ಲಿ ಬರುವ ಮೂವತ್ತಮೂರನೆಯ ಸೂಕ್ತ ರುದ್ರನ ಕುರಿತಾದುದಾಗಿದೆ. ಇದರಲ್ಲಿ ಒಟ್ಟು ಹದಿನೈದು ಮಂತ್ರಗಳಿವೆ. ಈ ಸೂಕ್ತವು ರುದ್ರನ ಸ್ವರೂಪ, ಸ್ವಭಾವಗಳನ್ನು ಸುಂದರವಾಗಿ ನಿರೂಪಿಸುತ್ತದೆ.

ಈ ಸೂಕ್ತಕ್ಕೆ ಭಾಷ್ಯ ಬರೆದ ಸಾಯಣಾಚಾರ್ಯರು 'ರುದ್ರ' ಶಬ್ದಕ್ಕೆ ಹೀಗೆ ವ್ಯಾಖ್ಯಾನ ಮಾಡುತ್ತಾರೆ: 'ಗುಡುಗಿನ ಹಾಗೆ ಧ್ವನಿ ಮಾಡುವವನು, ಶಬ್ದ ಮಾಡುತ್ತ ಮೋಡದ ಮಧ್ಯದಲ್ಲಿ

ನಿವೃತ್ತ ಸಂಸ್ಕೃತ ಪ್ರಾಧ್ಯಾಪಕಿಯಾಗಿರುವ ಲೇಖಕಿ ಸಂಸ್ಕೃತ ವಾಙ್ಮಯದಲ್ಲಿ ಅಪಾರ ವಿದ್ವತ್ತುಳ್ಳವರು; ಆಶ್ರಮದ ಭಕ್ತರು.

ಧಾವಿಸುವವನು, ಶತ್ರುಗಳನ್ನು ಸೋಲಿಸಿ ಅಳುವಂತೆ ಮಾಡುವವನು, ಪ್ರಳಯಕಾಲದಲ್ಲಿ ಎಲ್ಲರನ್ನೂ ರೋದಿಸುವಂತೆ ಮಾಡುವವನು, ಸಂಸಾರವೆಂಬ ದುಃಖವನ್ನು ನಾಶಮಾಡುವವನು, ಆತ್ಮವಿದ್ಯೆಯನ್ನು ಉಪಾಸಕರಿಗೆ ಉಪದೇಶ ಮಾಡಿ ಬೆಳಕನ್ನು ಆವರಿಸಿರುವ ಕತ್ತಲೆಯನ್ನೂ, ಜ್ಞಾನವನ್ನು ಆವರಿಸಿರುವ ಅಜ್ಞಾನವನ್ನೂ ನಾಶ ಮಾಡುವವನು.' ಹೀಗೆ ಅನೇಕ ವಿವರಣೆಗಳನ್ನು ಸಾಯಣಾಚಾರ್ಯರು ಕೊಡುತ್ತಾರೆ. ಈ ಸೂಕ್ತವನ್ನು ಅಧ್ಯಯನ ಮಾಡಿದಾಗ, ಮೇಲಿನ ಎಲ್ಲ ಅರ್ಥಗಳೂ ರುದ್ರನಿಗೆ ಸೂಕ್ತವಾದುವುಗಳೇ ಆಗಿವೆ ಎಂದು ತಿಳಿದುಬರುತ್ತದೆ.

ರುದ್ರಸೂಕ್ತದಲ್ಲಿ ರುದ್ರನ ಸ್ವರೂಪವನ್ನು ಹೀಗೆ ಬಣ್ಣಿಸಿರುವುದು ಕಾಣಬರುತ್ತದೆ:

"ರುದ್ರನು ದೃಢವಾದ ಬಲಿಷ್ಠವಾದ ಅವಯವವುಳ್ಳವನು. ಇವನು ನಾನಾರೂಪಗಳಿಂದ ಕೂಡಿ ಹೊರಹೊಮ್ಮುತ್ತಿರುವ, ಪ್ರಕಾಶಮಾನವಾದ ತೇಜಸ್ಸುಳ್ಳವನು. ಅವನು ಸ್ವತಃ ಪ್ರಕಾಶಮಾನನಾದರೂ ಬಹಳ ಕಾಂತಿಯುಳ್ಳದ್ದೂ, ಹಿತಕರವೂ ಮನೋಹರವೂ ಆಗಿರುವ ಚಿನ್ನದ ಆಭರಣಗಳಿಂದ ಶೋಭಿಸುತ್ತಿರುವವನು. ಪ್ರಭುವಾದ ಇವನು ಎಲ್ಲಾ ಲೋಕಗಳನ್ನೂ ತನ್ನಲ್ಲಿ ಧರಿಸಿದ್ದಾನೆ. ಇವನಿಂದ ವಿಶ್ವಶಕ್ತಿ ಎಂದಿಗೂ ಬೇರೆಯಾಗುವುದಿಲ್ಲ (**ಈಶಾನಾದಸ್ಯ ಭುವನಸ್ಯ ಭೂರೇರ್ನವಾ ಉ ಯೋಷದ್ ರುದ್ರಾದಸುರ್ಯಂ**). ಇವನು ರಥದಲ್ಲಿ ಕುಳಿತಿರುತ್ತಾನೆ. ಮಹತ್ವಪೂರ್ಣನಾದುದರಿಂದ ಲೋಕದಲ್ಲಿ ಪ್ರಸಿದ್ಧನಾಗಿದ್ದಾನೆ."

ಮುಂದುವರೆದು, ಸೂಕ್ತಕಾರನು ರುದ್ರನಲ್ಲಿ ಹೀಗೆ ತನ್ನ ಪ್ರಾರ್ಥನೆಯನ್ನು ಸಲ್ಲಿಸುತ್ತಾನೆ:

"ರುದ್ರನೇ! ನಿನ್ನಿಂದ ಸಿಗಬೇಕಾದ ಸುಖ ನಮಗೆ ದೊರಕಲಿ. ನಮ್ಮನ್ನು ಸೂರ್ಯ ಸಂದರ್ಶನದಿಂದ ಬೇರೆ ಮಾಡಿ ಕತ್ತಲಲ್ಲಿರಿಸಬೇಡ. ನೀನು ಸೃಷ್ಟಿಸಿರುವ ಸುಖಕರವಾದ ಗಿಡಮೂಲಿಕೆಗಳನ್ನು ಸೇವಿಸಿ ನಾವು ಮಕ್ಕಳು ಮೊಮ್ಮಕ್ಕಳೊಡನೆ ಆರೋಗ್ಯಕರವಾಗಿಯೂ ದೃಢಕಾಯರಾಗಿಯೂ ನೂರು ವರ್ಷಗಳ ಕಾಲ ಜೀವಿಸುವಂತೆ ಮಾಡು. ನಮ್ಮ ಪಾಪಗಳನ್ನು, ದೇಹದ ರೋಗಗಳನ್ನು ದೂರ ಮಾಡು. ನೀನು ವೈದ್ಯರಲ್ಲಿ ಅತ್ಯಂತ ಶ್ರೇಷ್ಠನಾದ ವೈದ್ಯ ಎಂದು ನಾವು ಕೇಳಿರುತ್ತೇವೆ. (**ಭೇಷಜೋರ್ಭಿಷಕ್ತಮಂ ತ್ವಾಂ ಭಿಷಜಂ ಶೃಣೋಮಿ** – ತೈತ್ತಿರೀಯ ಸಂಹಿತೆ ಕೂಡ ರುದ್ರನನ್ನು **ಪ್ರಥಮೋ ದೈವ್ಯೋ ಭಿಷಜಾಂ** – ವೈದ್ಯರಲ್ಲಿ ಮೊದಲನೆಯವನು ರುದ್ರ ಎಂದು ಕರೆದಿದೆ). ಅಂತಹ ನೀನು ನಮ್ಮನ್ನು ಈ ಸಂಸಾರಸಾಗರದಿಂದ ಸುಖವಾಗಿ ದಾಟಿಸು. ನಾವು ನಿನಗೆ ಅಪಚಾರ ಮಾಡಿ ಕೋಪವನ್ನು ತರದಂತೆ ಆಗಲಿ. ಜಗತ್ತಿನಲ್ಲಿ ಬೇಡಿದುದನ್ನೆಲ್ಲ ಕರುಣಿಸುವ, ಕಾಮನೆಗಳನ್ನೆಲ್ಲ ಮಳೆಯಂತೆ ಸುರಿಸುವ ಕಾಮವರ್ಷಿಯೂ, ಸರ್ವಜ್ಞನೂ, ವಿದ್ಯೋತಕನೂ (ಬೆಳಗುತ್ತಿರುವವನು) ಆದ ರುದ್ರನೇ! ನೀನು ಯಾವ ರೀತಿಯಲ್ಲಿ ನಮ್ಮ ಮೇಲೆ ಕೋಪಿಸಿಕೊಳ್ಳುವುದಿಲ್ಲವೋ, ಕೋಪದಿಂದ ನಮ್ಮನ್ನು ಹಿಂಸಿಸುವುದಿಲ್ಲವೋ, ಆ ರೀತಿ ನಮ್ಮ ಮೇಲೆ ಕೃಪೆ ಮಾಡು."

ತೈತ್ತಿರೀಯ ಸಂಹಿತೆಯಲ್ಲಿ 'ರುದ್ರಾಧ್ಯಾಯ', 'ಚಮಕಾಧ್ಯಾಯ' ಎಂದು ತಲಾ ಹನ್ನೊಂದು ಅನುವಾಕಗಳಿರುವ ಎರಡು ಪೂರ್ಣ ಅಧ್ಯಾಯಗಳೇ ರುದ್ರನಿಗೆ ಮೀಸಲಾಗಿವೆ. ಇಲ್ಲಿ ಇವನನ್ನು 'ನೀಲಗ್ರೀವ', 'ಸಹಸ್ರಾಕ್ಷ', 'ತ್ರಿಪುರಾಂತಕ', 'ತ್ರಿಕಾಗ್ನಿಕಾಲ', 'ಮೃತ್ಯುಂಜಯ', 'ಸರ್ವೇಶ್ವರ' ಮುಂತಾದ ಹೆಸರುಗಳಿಂದ ಕರೆಯಲಾಗಿದೆ. ಈ ಎಲ್ಲ ಹೆಸರುಗಳೂ ಅವನ ಗುಣ ಮಾಹಾತ್ಮ್ಯವನ್ನು ಬಿಂಬಿಸುತ್ತವೆ. ಈ ಎರಡೂ ಅಧ್ಯಾಯಗಳ ಸಾರಾಂಶವನ್ನು ಹೀಗೆ ನೀಡಬಹುದು:

ಭಗವತ್ತತ್ತ್ವದಿಂದ ವಿಕಾಸಗೊಂಡ ವೃತ್ತಿಗಳೂ (ಕಮ್ಮಾರ, ಚಮ್ಮಾರ ಮುಂತಾದುವುಗಳು), ಧಾನ್ಯಗಳೂ, ಬಣ್ಣಗಳೂ, ಸೇನೆ, ಸೇನಾಂಗಗಳಾದ ರಥ, ಕುದುರೆ ಇತ್ಯಾದಿಗಳು, ಯಜ್ಞ, ಯಜ್ಞಕ್ಕೆ ಸಂಬಂಧಿಸಿದ ವೇದಿಕೆ, ಉರುವಲು, ಸೌಟು, ಚಮಚ ಇತ್ಯಾದಿಗಳು – ಇವೆಲ್ಲವೂ ಶಿವನೇ ಆಗಿದ್ದಾನೆ. ಅನಂತರೂಪ ಅನಂತನಾಮಗಳಲ್ಲಿ ಸಮಾನವಾಗಿ ಶಿವಭಾವವನ್ನು ಕಂಡು, ಋಷಿ ಆನಂದಗೊಳ್ಳುತ್ತಾನೆ, ತನ್ಮಯನಾಗುತ್ತಾನೆ. **ಯೋ ರುದ್ರೋ ವಿಶ್ವಾ ಭುವನಾನಿ ವಿವೇಶ ತಸ್ಮೈ ರುದ್ರಾಯ ನಮೋಽಸ್ತು** – ಯಾವ ರುದ್ರನು ಅಗ್ನಿ, ನೀರು, ಗಿಡಮೂಲಿಕೆ ಇತ್ಯಾದಿಗಳಿಂದ ಕೂಡಿ ವಿಶ್ವವನ್ನು, ಇತರ ಲೋಕಗಳನ್ನು ಪ್ರವೇಶಿಸಿದ್ದಾನೋ ಅಂತಹವನಿಗೆ ನಮಸ್ಕಾರ.

**ವಿಶ್ವಂ ಭೂತಂ ಭುವನಂ ಚಿತ್ರಂ ಬಹುಧಾ ಜಾತಂ**
**ಜಾಯಮಾನಂ ಚ ಯತ್ ಸರ್ವೋ ಹ್ಯೇಷ ರುದ್ರಸ್ತಸ್ಮೈ**
**ರುದ್ರಾಯ ನಮೋಽಸ್ತು**

'ಭೌತಿಕವಾದ ಪ್ರಪಂಚ, ಸೃಷ್ಟಿಯಾದ ಜೀವಿಗಳು, ಅನೇಕ ರೀತಿಯ ಬಣ್ಣ, ಆಕಾರ, ರೂಪಗಳಿಂದ ಅನಂತವಾಗಿ ವಿಕಾಸಗೊಳ್ಳುವ ಯಾವುದಿದೆಯೋ ಅದೆಲ್ಲವೂ ರುದ್ರನೇ. ಅಂತಹ ರುದ್ರನಿಗೆ ನಮಸ್ಕಾರ.'

ರುದ್ರಾಧ್ಯಾಯದಲ್ಲಿ, ರುದ್ರನನ್ನು ಶಿವನೆಂದೂ, ಶಿವತಮನೆಂದೂ ಕರೆದಿರುವುದನ್ನು ಗಮನಿಸಬಹುದು. 'ಶಿವ' ಎನ್ನುವ ಪದ ಪರಬ್ರಹ್ಮದ ಸೃಷ್ಟಿ–ಸ್ಥಿತಿ–ಲಯಕಾರಕವಾದ ಬ್ರಹ್ಮ–ವಿಷ್ಣು–ಮಹೇಶ್ವರ ತತ್ತ್ವಗಳನ್ನು ಮೀರಿದ ಸಂಜ್ಞಾವಿಶೇಷ ಎಂದು ಪೂಜ್ಯ ಸ್ವಾಮಿ ಹರ್ಷಾನಂದಜಿ ಅವರು ತಮ್ಮ ಹಿಂದೂ ವಿಶ್ವಕೋಶದಲ್ಲಿ ವಿವರಿಸಿದ್ದಾರೆ. 'ಶಿವ' ಎಂಬ ಪದಕ್ಕೆ ಹಲವು ಧಾತುಗಳಿಂದ ಬೇರೆ ಬೇರೆ ಅರ್ಥಗಳು ಬರುತ್ತವೆ. ಅವುಗಳೆಂದರೆ, **ಪರಮಧಾಮ, ಕ್ಷೇಮ, ಮೋಹಕತೆ, ರಮಣೀಯತೆ, ಮಂಗಳ ಮೊದಲಾದವು ಯಾರಲ್ಲಿ ಇವೆಯೋ ಅವನು, ಅಜ್ಞಾನವನ್ನು ನಾಶಮಾಡುವವನು, ಅಣಿಮಾದಿ ಅಷ್ಟಸಿದ್ಧಿಗಳುಳ್ಳವನು, ಜಗತ್ತೆಲ್ಲವೂ ಯಾರಲ್ಲಿ ಸುಪ್ತವಾಗಿವೆಯೋ ಅವನು** ಮುಂತಾದುವು. ಈ ಎಲ್ಲ ಅರ್ಥಗಳ ಸಮನ್ವಯವೂ ಸೂಕ್ತಗಳಲ್ಲಿ ಆಗಿರುವುದನ್ನು ಗಮನಿಸಬಹುದು.

**ಈಶಾನ, ವಾಮದೇವ, ತತ್ಪುರುಷ, ಅಘೋರ, ಸದ್ಯೋಜಾತ** – ಹೀಗೆ ರುದ್ರನಿಗೆ ಐದು ಮುಖಗಳಿವೆ ಎಂದು ರುದ್ರಾಧ್ಯಾಯ

ಹೇಳುತ್ತದೆ. ಮೇಲಿನ ಪದಗಳ ವಿವರಣೆ ಮಹಾನಾರಾಯಣ ಉಪನಿಷತ್ತಿನಲ್ಲಿ ಹೀಗೆ ಕಂಡುಬರುತ್ತದೆ:

೧. **ಸದ್ಯೋಜಾತ:** ಹೀಗೆಂದರೆ ಎಲ್ಲ ಬಗೆಯ ಜ್ಞಾನಗಳ ಮೂಲ. ಇದು ಶಿವನ ಪಶ್ಚಿಮಾಭಿಮುಖವಾಗಿರುವ ಮುಖ. ಇದು ಹೊರಮುಖವಾದಾಗ ಸೃಷ್ಟಿವಿಕಾಸವೆಂತಲೂ, ಒಳಮುಖವಾದಾಗ ಲಯವೆಂತಲೂ ವರ್ಣಿಸಲಾಗಿದೆ. ಈ ತತ್ತ್ವಕ್ಕೆ 'ಮಹಾದೇವ' ಎಂದೂ ಹೆಸರು.

೨. **ಅಘೋರ:** ಘೋರ, ಘೋರತರ, ಅಘೋರವೆಂಬ ತಾಮಸ ರೂಪಗಳಿಂದ ಎಲ್ಲ ಲೋಕಗಳಲ್ಲಿಯೂ ವಿಹರಿಸುವವನು ಎಂದು ಈ ಪದಕ್ಕೆ ಅರ್ಥ. ಈ ಮುಖ ದಕ್ಷಿಣಾಭಿಮುಖವಾಗಿದ್ದು, ಸೃಷ್ಟಿಯ ಕಡೆಯಲ್ಲಿ ಎಲ್ಲವನ್ನೂ ತನ್ನಲ್ಲಿ ವಿಲೀನ ಮಾಡಿಕೊಳ್ಳುತ್ತದೆ. ಇದಕ್ಕೆ 'ದಕ್ಷಿಣಾಮೂರ್ತಿ' ಎಂಬ ಹೆಸರೂ ಇದೆ.

೩. **ತತ್ಪುರುಷ:** ಇದು ಪೂರ್ವಾಭಿಮುಖವಾಗಿದ್ದು, ಪರಮಪುರುಷನನ್ನೇ ಸೂಚಿಸುವುದಾಗಿದೆ. ಇದು ದೇವಾಧಿದೇವತೆಗಳೆಲ್ಲರನ್ನೂ ಮೀರಿದುದು. ಶತ್ರುಗಳನ್ನು, ಅಜ್ಞಾನ, ಅಂಧಕಾರಗಳನ್ನು ನಾಶ ಮಾಡಿ ಆನಂದ, ಮಂಗಳಗಳನ್ನು ಉಂಟುಮಾಡುವ ತತ್ತ್ವ ಇದು.

೪. **ವಾಮದೇವ:** ಉದಾರವೂ ಜ್ಯೇಷ್ಠವೂ ಎಲ್ಲ ಉತ್ಕೃಷ್ಟವಾದುದರ ಮೂಲ ನೆಲೆಯೂ ಕಾಲರೂಪಿಯೂ ಭೂಮಿಯಲ್ಲಿ ಕಾಲಕಾಲಕ್ಕೆ ಆಗುವ ಬದಲಾವಣೆಗಳಿಗೆ ಮತ್ತು ಪ್ರಕೃತಿಯ ಕ್ಷೋಭೆಗಳಿಗೆ ಕಾರಣನೂ, ವಿವಿಧ ಶಕ್ತಿಗಳ ಉತ್ಪಾದಕನೂ ಆದ ತತ್ತ್ವವನ್ನು 'ವಾಮದೇವ' ಎಂದು ಕರೆಯುತ್ತಾರೆ. ಇದು ಉತ್ತರಾಭಿಮುಖವಾಗಿದೆ.

೫.**ಈಶಾನ:** ಇದು ಮೇಲ್ಮುಖವಾಗಿದ್ದು, ಮೋಕ್ಷದಾಯಕ ತತ್ತ್ವವೆಂದು ವರ್ಣಿತವಾಗಿದೆ. ಎಲ್ಲ ವಿದ್ಯೆಗಳಿಗೂ ನೆಲೆಯಾದ, ಎಲ್ಲ ಜೀವಿಗಳಿಗೂ ಒಡೆಯನಾದ, ಎಲ್ಲವನ್ನೂ ಮೀರಿದ ತತ್ತ್ವ ಇದು. ಬ್ರಹ್ಮನಿಗೂ ಅಧಿಪತಿಯಾದ ಪರಬ್ರಹ್ಮತತ್ತ್ವವೇ ಇದಾಗಿದೆ.

ಮಹಾನಾರಾಯಣ ಉಪನಿಷತ್ತು ಶಿವನನ್ನು ಹೀಗೆ ವರ್ಣಿಸುತ್ತದೆ: ಜ್ಞಾನದಾತನಾದ ಇವನು ಸಂಪೂರ್ಣ ವಿಶ್ವಕ್ಕೇ ಮಾರ್ಗದರ್ಶಕನಾಗಿದ್ದಾನೆ. ಇವನು ಅನುಪಮವೂ, ವಿಸ್ತಾರ ಹಾಗೂ ವಿಶಾಲವೂ ಆದ ವಿರಾಟ್ ಆಕೃತಿಯನ್ನು ಹೊಂದಿರುವುದರಿಂದ, ವಿಶ್ವವನ್ನೆಲ್ಲಾ ವ್ಯಾಪಿಸಿದ್ದಾನೆ.

**ನಿಧನಪತಯೇ ನಮಃ ನಿಧನಪತಾಂತಿಕಾಯ ನಮಃ**
**ಊರ್ಧ್ವಾಯ ನಮಃ ಊರ್ಧ್ವಲಿಂಗಾಯ ನಮಃ**
**ಹಿರಣ್ಯಾಯ ನಮಃ ಹಿರಣ್ಯಲಿಂಗಾಯ ನಮಃ...**

ಇವನು ಲಯಕ್ಕೂ ಅಧಿಪತಿಯಾಗಿದ್ದಾನೆ. ಆತ್ಯಂತಿಕ ಪ್ರಲಯವಾಗುವಾಗ, ಜೀವಿಗಳನ್ನು ಕೊಲ್ಲುವ ಯಮನೂ ಇವನಲ್ಲಿ ಲೀನವಾಗುತ್ತಾನೆ. ಆದ್ದರಿಂದ 'ನಿಧನಪತಿ' ಎನ್ನಿಸಿಕೊಳ್ಳುತ್ತಾನೆ. ಎಲ್ಲವನ್ನೂ ಮೀರಿದ ಪರಮೋತ್ಕೃಷ್ಟವಾದ ನೆಲೆ ಇವನದು. ಅಂತಹ ಪರಮೋನ್ನತ ನೆಲೆಯನ್ನೂ, ಜ್ಞಾನವನ್ನೂ ತನ್ನಲ್ಲಿ ಅಡಗಿಸಿಕೊಂಡಿದ್ದಾನೆ. ಜೀವಿಗಳಿಗೆ ಹಿತಕಾರಕನೂ, ರಮಣೀಯನೂ ಆಗಿದ್ದಾನೆ. ಜೀವಿಗಳು ಅವನನ್ನು ಕಾಣಲು ಹಂಬಲಿಸುವಂತಹ ಪರಮರಮಣೀಯ ಆಕಾರವನ್ನು ಅವನು ಪಡೆದಿದ್ದಾನೆ. ಇವನು ಸ್ವರ್ಗೀಯ ಆನಂದ ಸ್ವರೂಪಿ; ದಿವ್ಯವಾದ ಲಿಂಗಸ್ವರೂಪದಲ್ಲಿ ಭಕ್ತರಿಂದ ಆರಾಧಿಸಲ್ಪಡುವವನು. ಸೃಷ್ಟಿಲಯಗಳ ನಿರಂತರ ಚಕ್ರವಾದ 'ಭವ' ಸ್ವರೂಪಿಯೇ ಇವನು. ಎಲ್ಲವನ್ನೂ ಆತ್ಯಂತಿಕ ಲಯದಲ್ಲಿ ತನ್ನೊಳಗೆ ಸೆಳೆದುಕೊಳ್ಳುತ್ತಾನೆ. ಭಕ್ತರಿಗೆ ಅನುಭವ ವೇದ್ಯನಾಗಿರುವ ಇವನು ಪರಮಪವಿತ್ರನೂ, ಮಂಗಳರೂಪಿಯೂ ಆಗಿದ್ದಾನೆ ಎಂದು ಸ್ವಾಮಿ ವಿಮಲಾನಂದಜಿ ಅವರು ತಮ್ಮ ಮಹಾನಾರಾಯಣ ಉಪನಿಷತ್ತಿನ ಅನುವಾದದಲ್ಲಿ ಈ ಮಂತ್ರಗಳ ಅರ್ಥವನ್ನು ವಿವರಿಸಿದ್ದಾರೆ. ಹಾಗೆಯೇ ಅವರು 'ಲಿಂಗ' ಪದದ ಅರ್ಥವ್ಯಾಪ್ತಿಯನ್ನು ಹೀಗೆ ವರ್ಣಿಸುತ್ತಾರೆ:

ವಿಶ್ವವು ಮೊದಲು ಹಿರಣ್ಯಗರ್ಭದ ರೂಪದಲ್ಲಿದ್ದು, ಭಗವತ್ತತ್ತ್ವದಿಂದ ಹೊರಹೊಮ್ಮಿತು. ಕಾಲಾನುಕ್ರಮದಲ್ಲಿ ಅದೇ ವಿವಿಧ ರೂಪ, ಆಕೃತಿ, ಶಕ್ತಿ, ಸಾಮರ್ಥ್ಯಗಳಲ್ಲಿ ವ್ಯತ್ಯಾಸಗೊಂಡು, ವಿವಿಧ ಜೀವಿಗಳಾಗಿ ವಿಕಾಸಗೊಂಡಿತು. ಹೀಗೆ ವಿಶ್ವವಾಗಿ ರೂಪುಗೊಂಡ ಹಿರಣ್ಯಗರ್ಭವನ್ನೇ ಶಿವಲಿಂಗವು ಪ್ರತಿನಿಧಿಸುತ್ತದೆ. ಆ ಪರಮಪುರುಷನ ಹಿರಿಮೆ ಗರಿಮೆಗಳನ್ನು ಅದು ಬಿಂಬಿಸುತ್ತದೆ. ಈ ಮಹೇಶ್ವರನು ನಮ್ಮ ಹೃದಯಗುಹೆಯಲ್ಲಿ ನೆಲೆಸಿದ್ದಾನೆ. ಅಲ್ಲಿ ಅವನನ್ನು ಧ್ಯಾನಿಸಬೇಕು. ಅವನು ವೇದಗಳ ಆದಿಯಲ್ಲಿ ಹೇಳಿರುವ ಪ್ರಣವ ಅಥವಾ ಓಂಕಾರದಲ್ಲಿ ಪ್ರತಿಷ್ಠಿತನಾಗಿದ್ದಾನೆ. ಪ್ರಕೃತಿಯಲ್ಲಿ ಎಲ್ಲೆಲ್ಲೂ ಲೀನನಾಗಿದ್ದರೂ, ಅದನ್ನು ಮೀರಿದ ಪರತತ್ತ್ವವಾಗಿದ್ದಾನೆ ಎಂದು ಮಹಾನಾರಾಯಣ ಉಪನಿಷತ್ತು ಹೇಳುತ್ತದೆ.

ಹೀಗೆ ಎಲ್ಲೆಲ್ಲೂ ವ್ಯಾಪಿಸಿರುವ, ಎಲ್ಲದರ ಒಳಗೂ ಹೊರಗೂ ತುಂಬಿಕೊಂಡು ಪರಿಪೂರ್ಣನಾಗಿರುವ, ಎಲ್ಲರನ್ನೂ ಎಲ್ಲವನ್ನೂ ಕಾಪಾಡುವ, ಎಲ್ಲವನ್ನೂ ಮೀರಿದ ನೆಲೆಯಲ್ಲಿರುವ ಪರತತ್ತ್ವವನ್ನೇ 'ಶಿವ' ಎಂದು ವೇದವೇದಾಂತಗಳು ಸಾರುತ್ತಿವೆ. ಇದನ್ನು ಸಾಕ್ಷಾತ್ಕರಿಸಿಕೊಂಡು ಅನುಭವಿಸಿದ ಯೋಗಿಗಳು ಋಷಿಮುನಿಗಳು, ಅನುಭಾವಿಗಳು ಇದಕ್ಕೆ ಪ್ರಮಾಣೀಭೂತರಾಗಿದ್ದಾರೆ. ಅವರ ಮಾರ್ಗದಲ್ಲಿ ನಡೆದು ನಾವೂ ಪರಮೇಶ್ವರನ ಕೃಪೆಯನ್ನು ಪಡೆಯೋಣ.

**ಪರಂ ಪರಸ್ಥಂ ಗಹನಾದನಾದಿಮ್**
**ಏಕಂ ನಿವಿಷ್ಟಂ ಬಹುಧಾ ಗುಹಾಸು ।**
**ಸರ್ವಾಲಯಂ ಸರ್ವಚರಾಚರಸ್ಥಂ**
**ತ್ವಾಮೇವ ಶಂಭುಂ ಶರಣಂ ಪ್ರಪದ್ಯೇ ॥**

**ಮಾಯಾತೀತನೂ, ಇಂದ್ರಿಯಾತೀತನೂ, ಅನಾದಿಯಾದ ಗಹನತತ್ತ್ವವೂ, ಎಲ್ಲ ಜೀವಿಗಳಲ್ಲಿ ಬಗೆಬಗೆಯ ರೂಪಗಳಲ್ಲಿ ನೆಲೆಸಿರುವವನೂ, ಎಲ್ಲ ಚರ ಮತ್ತು ಅಚರ ಜೀವಿಗಳಿಗೆ ಆಶ್ರಯಸ್ಥಾನನೂ ಆದ ಶಂಭುವೇ, ನಿನ್ನಲ್ಲಿ ಮಾತ್ರವೇ ನಾನು ಶರಣುಹೋಗುತ್ತೇನೆ. – ಅಭಿನವಗುಪ್ತ**